**ದಿನಾಂಕ 08.11.2019 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್.ಬಿ.ಎಸ್. ವಕೀಲರಿಂದ**

ವಾದಿಯ ತಾಯಿಯ ಹೆಸರು ಅಕ್ಕಯಮ್ಮ. ವಾದಿಯ ತಂದೆಯ ಹೆಸರು ನಂಜೇಗೌಡ. ನನಗೆ ಓದಲು ಬರೆಯಲು ಬರುತ್ತದೆ. ಸಾಕ್ಷಿಗೆ ಒಂದು ಕೈಬರಹ ಪಹಣಿ ಪತ್ರಿಕೆಯನ್ನು ತೋರಿಸಿ ಅದರಲ್ಲಿ ವಾದಿಯ ತಾಯಿಯ ಹೆಸರು ನಮೂದು ಇದೆ ಎಂದು ಒಪ್ಪಿದ್ದರಿಂದ ಸದರಿ ದಾಖಲೆಯನ್ನು ನಿ.ಪಿ. 3 ಎಂದು ಗುರುತಿಸಿಕೊಳ್ಳಲಾಯಿತು. ಬೊಮ್ಮೇಗೌಡರಿಗೆ 2 ಗುಂಟೆ ಹಿಸ್ಸೆಯ ಮೂಲಕ ಬಂದಿರುವ ದಾಖಲೆಯನ್ನು ನಾನು ಸ್ವತಃ ನೋಡಿದ್ದೇನೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಡುತ್ತೇನೆ. ಬೊಮ್ಮೇಗೌಡರ 3 ಜನ ಮಕ್ಕಳು ತನ್ನ ತಂದೆ ಬೊಮ್ಮೇಗೌಡರಿಗೆ ಬಂದಿದ್ದ 2 ಗುಂಟೆ ಆಸ್ತಿಯನ್ನು 3 ಜನ ಹಿಸ್ಸೆ ಮಾಡಿಕೊಂಡಿರುವ ದಾಖಲೆಯನ್ನು ನಾನು ನೋಡಿದ್ದೇನೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಡುತ್ತೇನೆ. ನಂಜೇಗೌಡರ ತಂದೆಯ ಹೆಸರು ದೇವೇಗೌಡ. ದೇವೇಗೌಡರ ತಂದೆಯ ಹೆಸರು ಬೊಮ್ಮೇಗೌಡ ಎಂದರೆ ಅದು ನನಗೆ ಗೊತ್ತಿಲ್ಲ. ವಾದಿಯ ಮುತ್ತಜ್ಜನ ಹೆಸರು ಬೊಮ್ಮೇಗೌಡ ಬಿನ್ ಬಸವೇಗೌಡ ಎಂದು ಇದ್ದುದರಿಂದ 1 ನೇ ಪ್ರತಿವಾದಿಯ ಹೆಸರು ಬೊಮ್ಮೇಗೌಡ ಎಂದು ಹೆಸರು ಇರುವುದರಿಂದ ಬೊಮ್ಮೇಗೌಡ ಎಂಬ ಹೆಸರು 1 ನೇ ಪ್ರತಿವಾದಿಯ ತಂದೆ ಎಂದು ನಾನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೊಮ್ಮೇಗೌಡ ಬಿನ್ ಬಸವೇಗೌಡರವರು ಮರಣ ಹೊಂದಿದ ನಂತರ ಅಕ್ಕಯಮ್ಮ ಎಂಬುವವರಿಗೆ ಖಾತೆ ಬಂದಿದೆ ಎಂದರೆ ಸರಿ ಸಾಕ್ಷಿ ಸ್ವತಃ ಬೊಮ್ಮೇಗೌಡ ಬಿನ್ ಬಸವೇಗೌಡ ಎಂಬುವವರು ನನ್ನ ತಂದೆ ಎಂದು ಹೇಳುತ್ತಾರೆ. ನಿ.ಪಿ. 1 ರಲ್ಲಿ ವಾದಿಯ ಹೆಸರು ಇದೆ ಎಂದರೆ ಸರಿ. ವಾದಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಕ್ಷೆ ಮಾಡಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಸ್ವತಃ ವಾದಿ 2 ಗುಂಟೆ ಆಸ್ತಿಯಲ್ಲಿ ಸ್ವಾಧೀನ ಇಲ್ಲ ಎಂದು ಹೇಳುತ್ತಾರೆ. ವಾದಿಯು ಅವರ ತಾಯಿ ಅಕ್ಕಯಮ್ಮ ಮರಣ ಹೊಂದಿದ ನಂತರ ತನ್ನ ಹೆಸರಿಗೆ ಖಾತೆ ಮಾಡಿಕೊಂಡು ಖಾತೆ ಹೊಂದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ 1 ಗುಂಟೆಯಲ್ಲಿ ಸ್ವಾಧೀನ ಇದ್ದಾರೆಂದು ಹೇಳುತ್ತಾರೆ. ವಾದಿ 2 ಗುಂಟೆಯಲ್ಲಿ ಸ್ವಾಧೀನ ಇದ್ದರೂ ಪ್ರತಿವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.